**1 ನೇ ಹೆಚ್ಚುವರಿ ಸತ್ರ ಮತ್ತು ವಿಶೇಷ ನ್ಯಾಯಾಲಯ, ಚಿಕ್ಕಮಗಳೂರು**

**ಸ್ಪೆಷಲ್ ಮೊಕದ್ದಮೆ ನಂಃ 96/2023**

| | | |
|---|---|---|
| ಸಾಕ್ಷಿದಾರರ ಹೆಸರು | - ದೀಕ್ಷಿತ್ | ಪಿಡಬ್ಲೂ - 01 |
| ತಂದೆಯ ಹೆಸರು | - ರಾಜು | ಸಿಡಬ್ಲೂ - 01 |
| ವಯಸ್ಸು | - 23 ವರ್ಷ | |
| ಉದ್ಯೋಗ | - ಚಾಲಕ | |
| ವಾಸ ಸ್ಥಳ | - ಮಕ್ಕಿಮನೆ | |

ದಿನಾಂಕಃ 27-05-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ-

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಚಾಸಾ.2 ನನ್ನ ತಂದೆ. ಚಾಸಾ.4 ನನ್ನ ದೊಡ್ಡಪ್ಪ. ಚಾಸಾ.3, 5, 8 ಮತ್ತು 9 ಗೊತ್ತು. ಚಾಸಾ.6 ಮತ್ತು 7 ನನಗೆ ಗೊತ್ತಿಲ್ಲ. ನಾನು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜನಾಂಗಕ್ಕೆ ಸೇರಿದವನು. ಆರೋಪಿ ಒಕ್ಕಲಿಗ ಜನಾಂಗಕ್ಕೆ ಸೇರಿದವನು.
2. ನನ್ನ ತಂದೆ ಚಾಸಾ.2 ರವರು ಚಾಸಾ.3 ರವರ ಮನೆಯಲ್ಲಿ ಘಟನೆಯ 2-3 ವರ್ಷಗಳ ಹಿಂದಿನಿಂದ ಕೆಲಸ ಮಾಡಿಕೊಂಡಿದ್ದರು. ಚಾಸಾ.2 ರವರು ಕೆಲಸವನ್ನು ಮುಗಿಸಿ ಚಾಸಾ.3 ರವರ ಮನೆಯಲ್ಲಿಯೇ ಮಲಗುತ್ತಿದ್ದರು. ಅದೇ ರೀತಿ ದಿಃ 11-02-2022 ರಂದು ರಾತ್ರಿ ನನ್ನ ತಂದೆ ಕೆಲಸ ಮುಗಿಸಿ ಚಾಸಾ.3 ರವರ ಮನೆಯಲ್ಲಿ ಮಲಗಿದ್ದಾಗ ರಾತ್ರಿ ಸುಮಾರು 11 ಗಂಟೆಗೆ ಆರೋಪಿ ಚೇತನ್ ಮತ್ತು ಮೃತ ಆರೋಪಿಯಾದ

ವಿವೇಕಾನಂದರವರು ಚಾಸಾ.3 ರವರ ಮನೆಯ ಗೇಟಿನ ಬಳಿ ನಿಂತು ನನ್ನ ತಂದೆಯನ್ನು ಕರೆದಿದ್ದಾಗಿ ಆಗ ನನ್ನ ತಂದೆ ಯಾರು ಕರೆಯುತ್ತಿದ್ದಾರೆ ಎಂದು ಟಾರ್ಚನ್ನು ಹಾಕಿ ಮನೆಯಿಂದ ಹೊರಗೆ ಬಂದಾಗ ಆರೋಪಿತರು ನನ್ನ ತಂದೆಯನ್ನು ಕುರಿತು ಹೊಲೆಯ ಸೂಳೆಮಗನೆ, ಸೂಳೆಮಗನೇ, ಬೋಳಿಮಗನೆ ರಸ್ತೆಗೆ ಯಾಕೆ ಟಾರ್ಚ ಹಾಕುತ್ತೀಯಾ ಎಂದು ಬೈದಿದ್ದಾಗಿ, ಆಗ ನನ್ನ ತಂದೆ ಅವರನ್ನು ಯಾಕೆ ಎಂದು ಪ್ರಶ್ನಿಸಿದಾಗ ಆರೋಪಿತರು ದೊಣ್ಣೆಯಿಂದ ನನ್ನ ತಂದೆಯ ತಲೆಗೆ, ಮೈಗೆ ಮತ್ತು ಕಾಲುಗಳಿಗೆ ಮನಬಂದಂತೆ ಹೊಡೆದಿದ್ದಾಗಿ, ಆಗ ನನ್ನ ತಂದೆ ಕೆಳಗೆ ಬಿದಿದ್ದಾಗಿ, ಆರೋಪಿತರು ನನ್ನ ತಂದೆಗೆ ಸರ್ಕಾರ ನಿಮಗೆ ಎಷ್ಟೇ ಕೊಟ್ಟರು ನಿಮ್ಮ ಬುದ್ದಿಯನ್ನು ಬಿಡುವುದಿಲ್ಲ ಎಂದು ಬೈದು ಈ ವಿಷಯವನ್ನು ನಿನ್ನ ಮಗನಿಗೆ, ಪೊಲೀಸರಿಗೆ ಮತ್ತು ನಿನ್ನ ಅಣ್ಣನಿಗೆ ಹೇಳಬೇಡ ಹೇಳಿದರೆ ಸಾಯಿಸುತ್ತೇವೆ ಎಂದು ನನ್ನ ತಂದೆಗೆ ಹೆದರಿಸಿದ್ದಾಗಿ, ನಂತರ ಆರೋಪಿತರು ಒಂದು ಕಲ್ಲನ್ನು ನನ್ನ ತಂದೆಯ ಮುಖದ ಮೇಲೆ ಎತ್ತಿಹಾಕಿ ಗಾಯಗೊಳಿಸಿ ಅಲ್ಲಿಂದ ಹೋಗಿದ್ದರು. ನನ್ನ ತಂದೆ ನಿತ್ರಾಣಗೊಂಡು ಅಲ್ಲಿಯೇ ಬಿದ್ದಿದ್ದರು. ಮಾರನೆ ದಿನ ಗಾಯಗೊಂಡಿದ್ದ ನನ್ನ ತಂದೆಯನ್ನು ಚಾಸಾ.3 ರವರು ನೋಡಿ ಸದರಿ ವಿಚಾರವನ್ನು ನನ್ನ ದೊಡ್ಡಪ್ಪನಾದ ಚಾಸಾ.4 ನಾರಾಯಣರವರಿಗೆ ಫೋನ್ ಮಾಡಿ ತಿಳಿಸಿದ್ದರು. ನಂತರ ಚಾಸಾ.4 ರವರು ನನ್ನ ತಂದೆಯನ್ನು ಆಟೋದಲ್ಲಿ ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ

ದಾಖಲಿಸಿದ್ದರು. ಸದರಿ ಘಟನೆ ನಡೆದ ಸಮಯದಲ್ಲಿ ನಾನು ತೀರ್ಥಹಳ್ಳಿಯಲ್ಲಿ ಬಸ್ ಕಂಡಕ್ಟರ್ ಆಗಿ ಕೆಲಸ ಮಾಡಿಕೊಂಡಿದ್ದೆನು. ಘಟನೆಯ ಬಗ್ಗೆ ಚಾಸಾ.4 ರವರು ನನಗೆ ಫೋನ್ ಮಾಡಿ ತಿಳಿಸಿದರು. ನಂತರ ನಾನು ಕೊಪ್ಪ ಸರ್ಕಾರಿ ಆಸ್ಪತ್ರೆಗೆ ಹೋಗಿ ನನ್ನ ತಂದೆಯನ್ನು ನೋಡಿದೆನು. ಅಲ್ಲಿ ನನ್ನ ತಂದೆಯನ್ನು ವಿಚಾರಿಸಿದಾಗ ಅವರು ಮೇಲೆ ಹೇಳಿದಂತೆ ನಡೆದ ವಿಚಾರವನ್ನು ತಿಳಿಸಿದ್ದರು. ಕೊಪ್ಪ ಆಸ್ಪತ್ರೆಯ ವೈದ್ಯರು ಸೂಚಿಸಿದ ಮೇರೆಗೆ ಅದೇ ದಿನ ಅಂದರೆ ದಿಃ 12-12-2022 ರಂದು ರಾತ್ರಿ ನನ್ನ ತಂದೆಯನ್ನು ನಾನು ಮತ್ತು ಚಾಸಾ.4 ರವರು ಎನ್.ಆರ್.ಪುರ ಸರ್ಕಾರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು.

3. ನಂತರ ಅದೇ ದಿನ ನಾನು ಸಂಜೆ 6.30 ರಿಂದ 7 ಗಂಟೆ ಸಮಯಕ್ಕೆ ಎಂದು ನುಡಿದು ನಂತರ 7.30 ರಿಂದ 8 ಗಂಟೆ ಸುಮಾರಿಗೆ ಕೊಪ್ಪ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರನ್ನು ನೀಡಿದೆನು. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ದೂರನ್ನು ನಿ.ಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರಥಮ ವರ್ತಮಾನ ವರದಿಯನ್ನು ತೋರಿಸಲಾಗಿ ಅದರ ಕಲಂ.12 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ವರದಿಯನ್ನು

ನಿ.ಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು.

4. ನನ್ನ ತಂದೆಯ ತಲೆಗೆ, ಬಲಗೆನ್ನೆಯ ಬಳಿ ಮತ್ತು ಕೈಕಾಲುಗಳಿಗೆ ಏಟು ಬಿದ್ದಿತ್ತು. ಎನ್.ಆರ್.ಪುರ ಸರ್ಕಾರಿ ಆಸ್ಪತ್ರೆಯಲ್ಲಿ ನನ್ನ ತಂದೆ ಒಂದು ವಾರ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡರು. ನನ್ನ ತಂದೆ ಆರೋಪಿತರು ತನಗೆ ಅಡಿಕೆ ದಬ್ಬೆ ಮರದ ರಿಪೀಸ್ ಮತ್ತು ಒಂದು ಕಲ್ಲಿನಿಂದ ಹಲ್ಲೆ ಮಾಡಿದ್ದಾಗಿ ನನಗೆ ತಿಳಿಸಿದ್ದರು.

5. ನಾನು ನಿಪಿ.1 ದೂರಿನಲ್ಲಿ 1 ನೇ ಆರೋಪಿ ಚೇತನ್ ಮತ್ತು ಇನ್ನೊಬ್ಬ ಆರೋಪಿಯ ಬಗ್ಗೆ 1 ನೇ ಆರೋಪಿಯೊಂದಿಗೆ ಬಂದಿದ್ದ ವ್ಯಕ್ತಿಯೆಂದು ತಿಳಿಸಿದ್ದೆನು. ನಂತರ ದಿಃ 16-12-2022 ರಂದು ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆಯನ್ನು ನೀಡಿ 1 ನೇ ಆರೋಪಿಯೊಂದಿಗೆ ಬಂದಿದ್ದ ಇನ್ನೊಬ್ಬ ವ್ಯಕ್ತಿ ವಿವೇಕಾನಂದ ಉರುಫ್ ಪಮ್ಮಿ ಎಂದು ತಿಳಿಸಿದ್ದೇನೆ.

6. ದಿನಾಂಕ ನೆನಪಿಲ್ಲ ಬಹುಶಃ 16-12-2022 ಇರಬಹುದು ಅಂದು ಪೊಲೀಸರು ಚಾಸಾ.3 ರವರ ಮನೆಯ ಬಳಿ ಘಟನೆ ನಡೆದ ಸ್ಥಳಕ್ಕೆ ಬಂದಿದ್ದರು. ಆಗ ನಾನು, ನನ್ನ ತಂದೆ ಚಾಸಾ.2, ಚಾಸಾ.8 ಮತ್ತು 9 ರವರು ಅಲ್ಲಿ ಹಾಜರಿದ್ದೆವು. ಗಲಾಟೆ ನಡೆದ ಸ್ಥಳವನ್ನು ನನ್ನ ತಂದೆ ಪೊಲೀಸರಿಗೆ ತೋರಿಸಿದರು. ಅಲ್ಲಿ ಪೊಲೀಸರು ಸ್ಥಳವನ್ನು ಪರಿಶೀಲಿಸಿ ಮಹಜರ ಮಾಡಿಕೊಂಡು ಫೋಟೋಗಳನ್ನು ತೆಗೆದುಕೊಂಡರು. ಸದರಿ

ಫೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಗೆ ಎರಡು ಫೋಟೋಗಳನ್ನು ತೋರಿಸಲಾಗಿ ಅವುಗಳಲ್ಲಿ ತನ್ನ ಇರುವಿಕೆಯನ್ನು ಗುರುತಿಸಿ ಅವುಗಳನ್ನು ಮೇಲೆ ಹೇಳಿದಂತೆ ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ತೆಗೆದಿದ್ದಾಗಿ ನುಡಿದಿರುತ್ತಾರೆ. ಸದರಿ ಫೋಟೋಗಳನ್ನು ನಿ.ಪಿ.3 ಮತ್ತು ಪಿ.4 ಎಂದು ಗುರುತಿಸಲಾಯಿತು. ಸದರಿ ಫೋಟೋಗಳಲ್ಲಿ ನನ್ನೊಂದಿಗೆ ನನ್ನ ತಂದೆಯಾದ ಚಾಸಾ.2, ಚಾಸಾ.8, 9 ಮತ್ತು ಪೊಲೀಸರ ಇರುವಿಕೆ ಕಂಡು ಬರುತ್ತದೆ.

7. ಮಹಜರ ಜರುಗಿಸುವ ಸಮಯದಲ್ಲಿ ಸ್ಥಳದಲ್ಲಿ ಬಿದ್ದಿದ್ದ ಅಡಿಕೆ ದಬ್ಬೆ ಮರದ ರಿಪೀಸ್ ಮತ್ತು ಒಂದು ಕಲ್ಲನ್ನು ನನ್ನ ತಂದೆ ಪೊಲೀಸರಿಗೆ ಹಾಜರುಪಡಿಸಿ ಅವುಗಳಿಂದ ಆರೋಪಿತರು ತನ್ನ ಮೇಲೆ ಹಲ್ಲೆ ಮಾಡಿದ್ದಾಗಿ ತಿಳಿಸಿದರು. ಅವುಗಳನ್ನು ಪೊಲೀಸರು ತಮ್ಮ ವಶಕ್ಕೆ ಪಡೆದುಕೊಂಡರು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಒಂದು ಅಡಿಕೆ ದಬ್ಬೆ ಮರದ ರಿಪೀಸ್ ಮತ್ತು ಒಂದು ಸೈಜ್ ಕಲ್ಲನ್ನು ನೋಡಿ ಗುರುತಿಸಿ ಅವುಗಳನ್ನು ಆ ದಿನ ನನ್ನ ತಂದೆ ಪೊಲೀಸರಿಗೆ ಹಾಜರುಪಡಿಸಿದ್ದಾಗಿ ನುಡಿದ ಮೇರೆಗೆ ಅವುಗಳನ್ನು ಕ್ರಮವಾಗಿ ಮು.ಮಾ.1 ರಿಂದ 3 ಎಂದು ಗುರುತಿಸಲಾಯಿತು.

**(ಪಾಟೀ ಸವಾಲು: ಆರೋಪಿತರ ಪರ ವಕೀಲರು ನೊಂದ ವ್ಯಕ್ತಿ ಮತ್ತು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಚಾಸಾ.2 ಮತ್ತು ಚಾಸಾ.3 ರವರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡುವಂತೆ ಕೋರಿ ಅರ್ಜಿ ಸಲ್ಲಿಸಿದ್ದು ಅದನ್ನು**

ಪರಿಗಣಿಸಿದ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು.)

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ